**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-180 /2023** **PW-1**

**ದಿಃ 15.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲು : 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಜಿ ಎಸ್ ಎಂ ವಕೀಲರಿಂದ :

3. ನಮ್ಮ ಮುತ್ತಜ್ಜನ ಹೆಸರು ರಾಚಪ್ಪ ಚನ್ನಮಲ್ಲಪ್ಪ ಮುಳಮುತ್ತಲ ಎಂದರೆ ಸರಿ. ಸಿಟಿಸರ್ವೆ ನಂಬರ : 2670 ಮತ್ತು 2671 ಸದರಿ ವ್ಯಕ್ತಿ ಹೆಸರಿನಿಂದ ಬಂದಿರುತ್ತವೇಂದರೆ ಸರಿ. ಇವರ ಮರಣದ ನಂತರ ತಮ್ಮ ಅಜ್ಜನಾದ ಶಿವಪ್ಪನವರ ಹೆಸರಿಗೆ ವಾರಸಾನಾತೆಯಿಂದ ಈ ಆಸ್ತಿಗಳು ಬಂದಿರುತ್ತವೆಂದರೆ ಸರಿ. 1954 ರಲ್ಲಿ ಶಿವಪ್ಪನವರು ಸಿಟಿಸರ್ವೆ ನಂಬರ : 2672 ನ್ನು ಖರೀದಿ ಮಾಡಿರುತ್ತಾರೆಂದರೆ ಸರಿ. ಶಿವಪ್ಪನವರು ಜೀವಿತಾವದಿಯಲ್ಲಿ ದಿನಾಂಕ : 02.04.1975 ರಂದು ಸಿಟಿಸರ್ವೆ ನಂಬರ : 2670 ಮತ್ತು 2671 ಕ್ಕೆ ಸಂಬಂದಿಸಿದಂತೆ ತಮ್ಮ ತಂದೆ ಮತ್ತು ದೊಡ್ಡಪ್ಪನ ಹೆಸರಿಗೆ ಸಮನಾಗಿ ವಿಭಾಗ ಮಾಡಿಕೊಟ್ಟಿರುತ್ತಾರೆಂದರ ಸರಿ. ಈ ರೀತಿ ವಿಭಾಗ ಮಾಡಿಕೊಟ್ಟ ನಂತರ ಮೂಲ ಸಿಟಿಎಸರ್ವೆ ನಂಬರಗಳಾದ 2670 ಮತ್ತು 2671 ಕ್ರಮವಾಗಿ 2670/1, 2670/2, 2671/1 ಮತ್ತು 2671/2 ಎಂದು ಆಗಿರುತ್ತವೆಂದರೆ ಸರಿಯಲ್ಲ. ಇದೇ ರೀತಿ ಉತಾರವು ಸಹ ಆಗಿದ್ದು ತಾವು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ತಮ್ಮ ತಾತನವರು ಅವರು ಖರೀದಿ ಮಾಡಿದ ಸಿಟಿಸರ್ವೆ ನಂಬರ : 2672 ರಲ್ಲಿ ತಮಗೆ ಅರ್ಧ ಭಾಗ ಹಾಗೂ ತಮ್ಮ ದೊಡ್ಡಪ್ಪನ ಮಗನಾದ ವಿಶ್ವನಾಥನ ಹೆಸರಿನಲ್ಲಿ ಅರ್ದ ಭಾಗ ಮಾಡಿಕೊಟ್ಟಿರುತ್ತಾರೆಂದರೆ ಸರಿ. ತಮ್ಮ ಹೆಸರಿಗೆ ಮಾಡಿಕೊಟ್ಟ ವಿಭಾಗವು ನೋಂದಾಗಿರುವದಿಲ್ಲ ಎಂದರೆ ಸರಿ. ದಿನಾಂಕ : 27.04.2001 ರಲ್ಲಿ ತಮ್ಮ ತಂದೆಯವರು ಸಿಟಿಸರ್ವೆ ನಂಬರ : 2670 ರಲ್ಲಿ ಅವರ ಅರ್ದ ಭಾಗವನ್ನು ತಮ್ಮ ದೊಡ್ಡಪ್ಪನವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸತದರಿ ದಾಖಲೆಯಲ್ಲಿ ತಮ್ಮ ತಂದೆಯವರು ಸಿಟಿಸರ್ವೆ ನಂಬರ : 2670 ರಲ್ಲಿ ಅರ್ದ ಭಾಗ

ಬಿಟ್ಟುಕೊಟ್ಟ ಬಗ್ಗೆ ಉಲ್ಲೇಖ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಹೌದು ಎನ್ನುತ್ತಾರೆ. ಸದರಿ ದಾಖಲೆಯು ಆಸ್ತಿ ಉತಾರದ ನಕಲು ಪ್ರತಿಯಾಗಿದ್ದು ಅದನ್ನು ಗುರುತಿಸುವಿಕೆಯ ಉದ್ದೇಶದಿಂದ ನಿಐ 1 ಎಂದು ಗುರುತಿಸಲಾಯಿತು. ಇದು ನಾಟ್ ಅಡ್ಮಿಸಿಬಲ್ಲ ಎವಿಡೆನ್ಸ ಎಂದು ಸ್ಪಷ್ಟೀಕರಿಸಲಾಗಿದೆ. ತಾವು ಈ ದಾವೆಯಲ್ಲಿ ತಮ್ಮ ತಂದೆಯವರು ಮಾಡಿಕೊಟ್ಟಿದ್ದಾರೆನ್ನುವ ಕ್ರಯ ಪತ್ರವನ್ನು ರದ್ದುಪಡಿಸುವಂತೆ ಕೋರಿ ಯಾವದೇ ಮಾಗಣಿಯನ್ನು ಕೇಳಿಲ್ಲ ಎಂದರೆ ಸರಿ. ನಮ್ಮ ದೊಡ್ಡಪ್ಪನಾದ ಚನ್ನಮಲ್ಲಪ್ಪನವರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿರುವದಿಲ್ಲ. ದಿನಾಂಕ ಃ 27.04.2001 ರಂದು ತಮ್ಮ ದೊಡ್ಡಪ್ಪನವರ ಮಗನಾದ ವಿಶ್ವನಾಥ ರವರು 2672 ಆಸ್ತಿಯಲ್ಲಿ ಅವರ ಅರ್ದ ಭಾಗವನ್ನು ತಮಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿ. ಸಿಟಿಸರ್ವೆ ನಂಬರ ಃ 2672 ನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ.

5. ತಮ್ಮ ತಂದೆ ಮತ್ತು ತಾವು ಬೈಲಹೊಂಗಲ ಬ್ಯಾಂಕನಲ್ಲಿ ಸಾಲವನ್ನು ಪಡೆದಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ತಂದೆ ಯಾವ ಉದ್ದೇಶಕ್ಕಾಗಿ ಪಡೆದಿರುತ್ತಾರೆಂದು ಗೊತ್ತಿಲ್ಲ ಎನ್ನುತ್ತಾರೆ. ಅಬಿಷೇಕ ಫಾರ್ಮಾ ತಮಗೆ ಸೇರಿದ ಅಂಗಡಿ ಎಂದರೆ ಸರಿ. ಬೈಲಹೊಂಗಲ ಬಾಂಕನಲ್ಲಿ ಸದರಿ ಫಾರ್ಮಾ ಉದ್ದೇಶಕ್ಕಾಗಿಯೇ ಸಾಲವನ್ನು ಪಡೆದಿದ್ದು ತಾವು ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ತಂದೆಯು ಸಾಲವನ್ನು ತೀರಿಸುವದಾಗಿ ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. 2003 ರಲ್ಲಿ ಸದರಿ ಬ್ಯಾಂಕನ ಸಾಲವನ್ನು ಕರ್ನಾಟಕ ಬ್ಯಾಂಕನವರಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ ಸಾಲಕ್ಕೆ ಅಡಮಾನವಾಗಿ ಸಿಟಿಎಸ್ ನಂಃ 2671 ಅನ್ನು ಮಾಡಲಾಗಿದೆ ಎಂದರೆ ಸರಿ. ಸದರಿ ಸಾಲವನ್ನು ತೀರಿಸದ ಕಾರಣ ಸರ್ಫೇಸಿ ಆ್ಯಕ್ಟನಲ್ಲಿ 2008 ರಲ್ಲಿ ಹರಾಜನ್ನು ಮಾಡಿ ಎರಡು ಅಂಗಡಿಗಳು ಪಟ್ಟಣ ಎಂಬುವವರಿಗೆ ಮಾರಾಟವಾಗಿವೆ ಎಂದರೆ ಸರಿ. ಸದರಿ ಕ್ರಯವನ್ನು ರದ್ದು ಪಡಿಸುವಂತೆ ಕೋರಿ ಯಾವದೇ ಮಾಗಣಿಯನ್ನು ಈ ಪ್ರಕರಣದಲ್ಲಿ ಕೇಳಿರುವದಿಲ್ಲ. ಅದೇ ರೀತಿಯಾಗಿ ಪಟ್ಟಣ ಎಂಬುವವರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿರುವದಿಲ್ಲ. ಒ ಎಸ್ ನಂಃ 129/2007 ನ್ನು ತಮ್ಮ ಸಹೋದರನವರು ವಿಭಾಗ ಕೋರಿ ದಾವೆ ಹಾಕಿದ್ದು ಅದಕ್ಕೆ ತಾವು ತಕರಾರನ್ನು ಹಾಕಿರುತ್ತೀರಿ ಎಂದರೆ ಸರಿ. ಆದಾವೆಯಲ್ಲಿ ಸಿಟಿಎಸ್ ನಂಃ 2671 ದಾವಾ ಆಸ್ತಿ ಆಗಿತ್ತು ಎಂದರೆ ಸರಿ. ಸದರಿ ದಾವೆಯು ವಜಾ ಆಗಿರುತ್ತದೆಂದರೆ ಸರಿ. ಆ ಆದೇಶದ ವಿರುದ್ದ ನಾನು ಯಾವದೇ ರೀತಿಯ

ಮೇಲ್ಮನವಿಯನ್ನು ಸಲ್ಲಿಸಿರುವದಿಲ್ಲ. ಸದರಿ ದಾವೆಯನ್ನು ನ್ಯಾಯಾಲಯವು ತಂದೆ ಬದುಕಿದ್ದಾಗ ಮಕ್ಕಳು ಭಾಗಾಂಶ ಕೋರಿ ಕೇಸು ಮಾಡಲು ಬರುವದಿಲ್ಲ ಎಂದು ಹೇಳಿ ವಜಾ ಮಾಡಿರುತ್ತದೆಂದರೆ ಸಾಕ್ಷಿಯು ಯಾವ ಕಾರಣಕ್ಕೆ ವಜಾ ಆಗಿದೆ ಎಂಬುದು ಗೊತ್ತಿಲ್ಲ ಎನ್ನುತ್ತಾರೆ.

6. ಒ ಎಸ್ ನಂಃ 157/2008 ನ್ನು ತಮ್ಮ ತಾಯಿಯವರು ದಾವಾ ಆಸ್ತಿಗೆ ಸಂಬಂದಿಸಿದಂತೆ ತಮ್ಮ ಮೇಲೆ, ತಮ್ಮ ಸಹೋದರ ಹಾಗೂ ತಂದೆ ಯವರ ಮೇಲೆ ಹಾಗೂ ಪಟ್ಟಣ ಎಂಬುವವರ ಮೇಲೆ ಹಾಕಿದ್ದರು ಎಂದರೆ ಸರಿ. ಈ ಪ್ರಕರಣದಲ್ಲಿ ತಕರಾರನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ಈ ಕೇಸನ ಬಗ್ಗೆ ಮಾಹಿತಿ ಇರದ ಕಾರಣ ತಕರಾರಿನ ಬಗ್ಗೆ ಹೇಳಲು ಬರುವದಿಲ್ಲ ಎನ್ನುತ್ತಾರೆ. ಪಟ್ಟಣ ರವರು ತಮ್ಮ ಮೇಲೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಒ ಎಸ್ 313/2012 ಮತ್ತು 314/2012 ನ್ನು ಹಾಕಿದ್ದರು ಎಂದರೆ ಗೊತ್ತಿಲ್ಲ. ತಮ್ಮ ತಂದೆಯವರು ಪಟ್ಟಣ ರವರ ಮೇಲೆ ಒ ಎಸ್ 191/2010 ನ್ನು ಹಾಕಿರುತ್ತಾರೆಂದರೆ ಮಾಹಿತಿ ಇಲ್ಲ. ದಿನಾಂಕ ಃ 14.02.2011 ರಂದು ತಮ್ಮ ತಂದೆಯವರು ಎಂ ಜಿ ಅಗಲಿ ರವರಿಗೆ ದಾವಾ ಆಸ್ತಿರ್ಗೆ ಸಂಬಂದಿಸಿದಂತೆ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿ. ಅದಕ್ಕೆ ನನ್ನ ಒಪ್ಪಿಗೆ ಇರುವದಿಲ್ಲ ಎಂದು ನುಡಿಯುತ್ತಾರೆ. ತಮ್ಮ ತಂದೆಯವರು ಅವರ ಸ್ವಯಾರ್ಜಿತ ಆಸ್ತಿಯನ್ನು ಕ್ರಯ ಮಾಡಿಕೊಟ್ಟ ಕಾರಣ ತಮ್ಮ ಒಪ್ಪಿಗೆಯು ಅಗತ್ಯ ಇಲ್ಲ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ತಮ್ಮ ತಂದೆಯವರು ಹಾಗೂ ಪಟ್ಟಣ ರವರು ಆರ್ ಎ ನಂಃ 285/2015 ರಲ್ಲಿ ರಾಜೀ ಮಾಡಿಕೊಂಡು ದಾವಾ ಆಸ್ತಿಯನ್ನು ಎಂ ಜಿ ಅಗಲಿ ರವರಿಗೆ ಹಕ್ಕುಬಿಟ್ಟು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಈ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಈ ಪ್ರಸ್ತುತ ಕೇಸನಲ್ಲಿ ಯಾವೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆಂಬ ಬಗ್ಗೆ ಮಾಹಿತಿ ಇರುತ್ತದೆ. 3 ನೇ ಪ್ರತಿವಾದಿಯು ಪಟ್ಟಣ ರವರಿಂದ ಆಸ್ತಿಯನ್ನು ಖರೀದಿಸಿ ಭಾಡಿಗೆಗೆ ಕೊಟ್ಟಿರುತ್ತಾರೆಂದರೆ ಸರಿ. 3 ನೇ ಪ್ರತಿವಾದಿ ಮತ್ತು ರತನ ರವರ ನಡುವೆ ಆದ ಬಾಡಿಗೆ ಪತ್ರವನ್ನು ನಾನು ನೋಡಿರುವದಿಲ್ಲ. ತಾವು 3 ನೇ ಪ್ರತಿವಾದಿಯಿಂದ ಮತ್ತು ರತನ ರವರಿಂದ ಕಬಜಾ ಬಿಡಿಸಿಕೊಡಿ ಎಂದು ಹೇಳಿ ಯಾವದೇ ಮಾಗಣೆಯನ್ನು ಈ ಪ್ರಕರಣದಲ್ಲಿ ಕೇಳಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ತಾವು 3 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯ ಪತ್ರವನ್ನು ರದ್ದು ಮಾಡುವಂತೆ ಹಾಗೂ ರಾಜೀ ಅರ್ಜಿಯನ್ನು ರದ್ದು ಕೋರಿ ಯಾವದೇ ಮಾಗಣೆಯನ್ನು

ಮಾಡಿಲ್ಲ ಎಂದರೆ ಸರಿ. ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 29 ರಿಂದ 41 ರಲ್ಲಿರುವ ವಿಷಯಗಳು ತಮ್ಮ ಅಸಲರ್ಜಿಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ತಮ್ಮ ಪ್ರಮಾಣ ಪತ್ರದಲ್ಲಿರುವ ಮಾಹಿತಿಯು ತಮ್ಮ ಅಸಲರ್ಜಿಗೆ ಹೊಂದಾಣಿಕೆ ಆಗದಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಮಗೆ ಈ ಪ್ರಕರಣವನ್ನು ದಾಖಲಿಸಲು ಯಾವದೇ ವ್ಯಾಜ್ಯ ಕಾರಣ ಉಂಟಾಗದಿದ್ದರೂ ಸುಳ್ಳು ದಾವೆಯನ್ನು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು : 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನುಕೂಗಿಸಲಾಗಿ ಗೈರು ಹಾಜರಾದ ಕಾರಣ ಹಾಗೂ ಅವರ ಪರವಾಗಿ ಯಾರೂ ಪ್ರನಿಧಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.